# ಸರ್ವಾಂಗ ಸುಂದರ ಸಮಾಜ ನಿರ್ಮಾಣ ನಮ್ಮ ಕೈಯಲ್ಲೇ ಇದೆ !

ಶಾಂತಲಾ

*ತಮ್ಮ ಸಾಮಾಜಿಕ ಕಳಕಳಿಯನ್ನು ಹೃದಯಸ್ಪರ್ಶಿ ಶೈಲಿಯಲ್ಲಿ ನಿರೂಪಿಸಿರುವ ಕುಮಾರಿ ಶಾಂತಲಾ ಅವರು ಅನೇಕ ಸ್ವಯಂಸೇವಾ ಕೇಂದ್ರಗಳಲ್ಲಿ ಸಮಾಜಸೇವಾ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸಿದ್ದಾರೆ*

ಅದೊಂದು ದಿನ ಬೆಳಿಗ್ಗೆ ಬೇಗನೇ ಎದ್ದು ಸ್ನಾನಮಾಡಿ ದೇವಸ್ಥಾನಕ್ಕೆ ಹೋಗಬೇಕೆಂದು ಬಸ್ಸೊಂದರಲ್ಲಿ ಬಸ್ ಸ್ಟಾಂಡಿಗೆ ಬಂದೆ. ಅಲ್ಲಿಂದ ಮುಂದೆ ಇನ್ನೊಂದು ಬಸ್ಸಿನಲ್ಲಿ ಹೋಗಬೇಕು. ಸಂಬಂಧಪಟ್ಟ ಪ್ಲಾಟ್‌ಫಾರಂಗೆ ಹೋಗುತ್ತಿರುವಾಗ, ಪಕ್ಕದ ಬಸ್ಸಿನಲ್ಲಿ ಇರುವ ಪ್ರಯಾಣಿಕನೊಬ್ಬ ಕಿಟಕಿಯಿಂದ ಹೊರಗೆ ಉಗುಳಿದ. ಅದು ನೇರವಾಗಿ ನನ್ನ ಮೈಮೇಲೇ ಬಿತ್ತು! ಛೇ, ನಾನೀಗ ದೇವಸ್ಥಾನಕ್ಕೆ ಹೋಗುವುದು ಹೇಗೆ? ...ಮಡಿವಂತ ಮನಸ್ಸಿಗೆ ಮುಜುಗರವಾಯ್ತು. ಚಿಂತೆಯಾಯ್ತು. ... ಇನ್ನೊಂದು ಘಟನೆ. ಒಮ್ಮೆ ನನ್ನ ಒಬ್ಬರು ಅಣ್ಣ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಸಂದರ್ಭ. ಹಣ್ಣಿನ ವ್ಯಾಪಾರಿಯೊಬ್ಬ ಕಿತ್ತಲೆ ಹಣ್ಣುಗಳನ್ನು ಮಾರುತ್ತ ಬಂದನಂತೆ. ಈ ನನ್ನ ಅಣ್ಣ ಅವನಿಂದ ಕೆಲವು ಕಿತ್ತಲೆ ಹಣ್ಣುಗಳನ್ನು ಕೊಂಡುಕೊಂಡರಂತೆ. ಎದುರಿಗೆ ಕುಳಿತಿರುವ ಇನ್ನೂ ಎರಡು ಮೂರು ಜನ ಪ್ರಯಾಣಿಕರು ಕೂಡ ಹಣ್ಣುಗಳನ್ನು ಕೊಂಡುಕೊಂಡರಂತೆ. ಆಮೇಲೆ ಆ ಹಣ್ಣುಗಳನ್ನು ಬಿಡಿಸಿ ತಿನ್ನುವ ಕೆಲಸ. ಎದುರಿಗೆ ಕುಳಿತಿರುವ ಪ್ರಯಾಣಿಕರೊಬ್ಬರು ಆ ಹಣ್ಣನ್ನು ಬಿಡಿಸಿ ಸಿಪ್ಪೆಯನ್ನು ಅಲ್ಲೇ ಕಾಲ ಕೆಳಗೆ ಹಾಕಿದರು. ನೋಡಲು ಸಭ್ಯರಂತೆ, ಸುಶಿಕ್ಷಿತರಂತೆ ಕಾಣುತ್ತಿದ್ದರು. ಜೊತೆಗೆ ಶ್ರೀಮಂತರು, ಹೆಚ್ಚು ಕಡಿಮೆ ಅವರ ಎಲ್ಲ ಬೆರಳುಗಳಲ್ಲಿಯೂ ಚಿನ್ನದ ಉಂಗುರಗಳು! ಇದನ್ನೆಲ್ಲ ನೋಡುತ್ತಿದ್ದ ಅಣ್ಣ ಅವರಿಗೆ ಹೇಳಿದರಂತೆ, "ಸ್ವಾಮಿ, ಸಿಪ್ಪೆಯನ್ಯಾಕೆ ಕೆಳಗೆ ಹಾಕುತ್ತೀರಿ? ಕಿಟಕಿಯಿಂದ ಆಚೆಯಾದರೂ ಹಾಕಬಹುದಲ್ಲ!" ಅದಕ್ಕೆ ಅವರು "ರೈಲನ್ನು ಕ್ಲೀನ್ ಮಾಡುವವರು ಇದ್ದಾರಲ್ಲ, ಮಾಡ್ತಾರೆ ಬಿಡಿ" ಎಂದರಂತೆ ಉದಾಸೀನವಾಗಿ! ಈ ಅಣ್ಣ ಅಷ್ಟಕ್ಕೇ ಬಿಡದೇ ತಾವೇ ಆ ಸಿಪ್ಪೆಗಳನ್ನು ಎತ್ತಲು ಹೋದರಂತೆ. ಆಗ ಅವರು "ನೀವ್ಯಾಕೆ ಅದನ್ನು ತೆಗೆಯುತ್ತೀರಿ? ರೈಲು ಗುಡಿಸಿ ಕ್ಲೀನ್ ಮಾಡಲು ಜನ ಇದ್ದಾರೆ, ಮಾಡ್ತಾರೆ ಬಿಡಿ" ಎಂದರಂತೆ ಉಪಚಾರ ಮಾಡುವ ರೀತಿಯಲ್ಲಿ. ಆದರೂ ಈ ಅಣ್ಣ ಬಿಡದೇ ಆ ಎಲ್ಲ ಸಿಪ್ಪೆಗಳನ್ನೂ ತೆಗೆದು ಅದನ್ನು ಎಲ್ಲಿ ಹಾಕಬೇಕೊ ಅಲ್ಲಿಗೆ ಹಾಕಲು ಎತ್ತಿಕೊಂಡರು. ಆಗ ಇದನ್ನೆಲ್ಲ ಗಮನಿಸುತ್ತಿದ್ದ ಇನ್ನೊಬ್ಬ ಪ್ರಯಾಣಿಕರು ತಾವು ತಿಂದ ಹಣ್ಣಿನ ಸಿಪ್ಪೆಗಳನ್ನು ಎತ್ತಿಕೊಂಡರು. ಅವರೂ ಸಹ ಸಾಮಾನ್ಯವಾಗಿ ಎಲ್ಲರೂ ಮಾಡುವಂತೆ ಸಿಪ್ಪೆಗಳನ್ನು ಅಲ್ಲೇ ಕೆಳಗೆ ಹಾಕಿದ್ದರು. ಅಣ್ಣ ಮುಂದುವರಿಸಿ ಹೇಳಿದರು: "ನಾನು ಹಣ್ಣು ಮುಂತಾಗಿ ತಿಂದರೆ ಕಸ ಆಗುವಂತಹದ್ದನ್ನೆಲ್ಲ ಒಂದು ಕಾಗದದೊಳಗೆ ಅಥವಾ ಒಂದು ಕವರಿನಲ್ಲಿ ಹಾಕಿಟ್ಟುಕೊಂಡು ಕಸದ ಬುಟ್ಟಿಗೆ ಹಾಕುತ್ತೇನೆ. ಅದಕ್ಕಾಗಿ ನನ್ನ ಚೀಲದಲ್ಲಿ ಕಾಗದ ಅಥವಾ ಕವರ್ ಇಟ್ಟುಕೊಂಡಿರುತ್ತೇನೆ. ಕಾಗದದ ಚೂರು ಬಸ್ ಟಿಕೇಟು ಯಾವುದನ್ನೂ ಅಲ್ಲಲ್ಲೇ ಬಿಸಾಡೋದಿಲ್ಲ..." ಹೀಗೆ ಮಾಡುವ ಕೆಲವೇ ಕೆಲವರಾದರೂ ನಮ್ಮ ಮಧ್ಯೆ ಇದ್ದಾರೆ ಎನ್ನುವುದೇ ಒಂದು ಸಮಾಧಾನ.

ಇಂತಹ ಸಾವಿರಾರು ಘಟನೆಗಳು ದಿನ ನಿತ್ಯ ನಮ್ಮೆದುರಿಗೆ ನಡೆಯುತ್ತಿರುತ್ತವೆ. ನಮ್ಮೆಲ್ಲರಿಗೂ ಹೆಜ್ಜೆ ಹೆಜ್ಜೆಗೂ ಅನುಭವಕ್ಕೆ ಬರುತ್ತಿರುತ್ತವೆ. ಎಲ್ಲೆಂದರಲ್ಲಿ ಕಾಗದ ಪ್ಲಾಸ್ಟಿಕ್ ಚೂರುಗಳನ್ನು ಎಸೆಯುವುದು, ಹಣ್ಣು-ಹಂಪಲು ತಿಂಡಿ-ತಿನಿಸುಗಳನ್ನು ತಿಂದು ಸಿಪ್ಪೆ ಮೊದಲಾದ ಬೇಡದ ವಸ್ತುಗಳನ್ನು ಬಸ್ಸು, ಬಸ್ಸು-ನಿಲ್ದಾಣ, ರೈಲು, ರೈಲ್ವೇಸ್ಟೇಷನ್ ಎಲ್ಲೆಂದರಲ್ಲಿ ಬಿಸಾಡುವುದು, ಕಂಡಕಂಡಲ್ಲಿ ಉಗುಳುವುದು... ಅಂಗಡಿ ಬೀದಿಗಳು, ಫುಟ್‌ಪಾತ್, ಮಠ-ಮಂದಿರಗಳ ಇಕ್ಕೆಲಗಳನ್ನೂ ಮೊದಲುಗೊಂಡು ಎಲ್ಲೆಲ್ಲೂ ಕಸ-ಕೊಳೆಗಳ ರಾಶಿ. ಸುಂದರ ಸೌಧದ ಪಕ್ಕದಲ್ಲೇ ಕೊಳೆತು ನಾರುವ ಚರಂಡಿಗಳು, ಕಸದ ಕುಪ್ಪೆಗಳು. ನಾವು ನಡೆಯುವ ಸಾರ್ವಜನಿಕ ರಸ್ತೆಗಳೆಲ್ಲ ಎಲೆ ಅಡಿಕೆ ಮುಂತಾದುವುಗಳನ್ನು ಅಗಿದು ಉಗುಳುವ ಪೀಕುದಾನಿಗಳು (ಉಗುಳು ಪಾತ್ರೆ), ಮೂತ್ರದೊಡ್ಡಿಗಳು, ಪಾಯಖಾನೆಗಳಾಗಿವೆ! ಅದೇ ನಾವು ತೀರ್ಥಯಾತ್ರೆಗೆ ಹೋಗಲು ಇರುವ ರಾಜಮಾರ್ಗಗಳು, ರಥಬೀದಿಗಳು, ಮಹಾದ್ವಾರಗಳು. ಇಲ್ಲಿ ಚೀಟಿ ಅಂಟಿಸಬಾರದು, stick no Bills ಎಂದು ಬರೆದಿರುವಲ್ಲಿಯೇ ಅದರ ಮೇಲೆಯೇ ನವ ನವ ಶೈಲಿಯ ಜಾಹಿರಾತುಗಳು, ಅಶ್ಲೀಲ ಭಾವಚಿತ್ರಗಳು. ಇಂತಹ ಪರಿಸರಕ್ಕೆ, ಪರಿಸ್ಥಿತಿಗೆ ಕಾರಣರು ಯಾರು? ನಾವೇ!! ಆದ್ದರಿಂದ ಪರಿಹಾರಕ್ಕೂ ನಾವೇ ಹೊಣೆಗಾರರು ಅಲ್ಲವೇ?

ಮನೆಯ ಮುಂದೆ ನೀರು ಹಾಕಿ ರಂಗೋಲಿ ಇಟ್ಟು ಓರಣವಾಗಿಡುತ್ತೇವೆ. ಏಕೆ? ಅದು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ. ಆದರೆ ಸಾರ್ವಜನಿಕ ಶುಚಿತ್ವ ನಮ್ಮ ಸಂಸ್ಕೃತಿಗೆ ಹೊರತಾದ ವಿಚಾರವೇ? ಹಿಂದೆ ರಾಜಮಹಾರಾಜರ ಕಾಲದಲ್ಲಿ, ಚರಿತ್ರೆ ಹೇಳುವಂತೆ, ಊರು-ಕೇರಿಗಳು ಸ್ವಚ್ಛವಾಗಿರುತ್ತಿದ್ದವು. ಸಾರ್ವಜನಿಕ

ಸ್ವಚ್ಛತೆ ಸರಕಾರದ ಜವಾಬ್ದಾರಿ, ನಗರ ಸಭೆ ಅಥವಾ ಪುರಸಭೆಯವರು ಅದನ್ನು ಮಾಡಬೇಕು ಎಂದು ಭಾವಿಸುತ್ತೇವೆ. ನಾವು ಪ್ರತಿಯೊಬ್ಬರೂ ನಮ್ಮ ಪಾತ್ರವನ್ನು ಕೇವಲ ಕೊಳಕು ಹೆಚ್ಚಿಸುವುದರಲ್ಲಿ ಮಾತ್ರ ಕಂಡುಕೊಳ್ಳುತ್ತೇವೆ. ಆದರೆ ಜನರ ಸಹಕಾರವಿಲ್ಲದೇ ಯಾವ ಸರಕಾರವೇ ಆಗಲಿ, ಸಾರ್ವಜನಿಕ ಶುಚಿತ್ವವನ್ನು ಸಾಧಿಸಲಾರದು. ಸಾರ್ವಜನಿಕ ಶುಚಿತ್ವವನ್ನು ಬೇರೆ ದೇಶಗಳು ಶಾಸನಬದ್ಧವಾಗಿ ಮಾಡಿವೆ ಕೊಳೆ ಮಾಡುವವರಿಗೆ ಕಠಿಣ ದಂಡನೆ ವಿಧಿಸಲಾಗುತ್ತದೆ. ಸಾರ್ವಜನಿಕ ಶುಚಿತ್ವ ಬಹಳ ಮುಖ್ಯ ಎಂಬುದು ಇನ್ನೂ ನಮ್ಮ ಮನಸ್ಸಿಗೆ ಅನ್ನಿಸುತ್ತಿಲ್ಲ. ಮಲಿನತೆಗೆ ತೀಕ್ಷ್ಣವಾಗಿ ಪ್ರತಿಕ್ರಿಯೆ ತೋರುವವರು ಎಲ್ಲೋ ಕೆಲವರು. ಉಳಿದವರೆಲ್ಲರೂ ಹೃತ್ಪೂರ್ವಕವಾಗಿ ಅದನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಇದಕ್ಕೆ ಮೂಲಕಾರಣ ಬೇಜ ವಾಬ್ದಾರಿತನ.

ನಮ್ಮಲ್ಲಿರುವ ಅನೇಕರು ಸುಶಿಕ್ಷಿತರು, ವಿಚಾರವಂತರು, ನಾವು ಎತ್ತ ಸಾಗುತ್ತಿದ್ದೇವೆ, ನಮ್ಮ ನಾಗರೀಕತೆಯ ಗತಿ ಯಾವ ದಿಕ್ಕಿಗೆ, ನಮ್ಮಲ್ಲಿರುವ ಪ್ರತಿಭೆಗಳು ತಳೆಯುತ್ತಿರುವ ರೂಪ ಎಂತಹದ್ದು—ಎಂದು ಕ್ಷಣ ಕಾಲ ನಿಂತು ಅವಲೋಕಿಸಬೇಕು, ಪರ್ಯಾಲೋಚಿಸಬೇಕು, ಪರಿಭಾವಿಸಬೇಕು. ಇದಕ್ಕೆಲ್ಲ ಕಾರಣ ಜನಸಂಖ್ಯೆ, ಬಡತನ, ಅನಕ್ಷರತೆ, ಎಂದು ಮುಂತಾಗಿ ದೂರುವುದು ತರವಲ್ಲ. ಅದು ಕೇವಲ ಪಲಾಯನವಾದ! ದೇಶ ಬಡವಾದ ಮಾತ್ರಕ್ಕೆ ಅಶಿಸ್ತು, ಅನೀತಿ, ಅಶುದ್ಧತೆ, ಅಶ್ಲೀಲತೆಗಳು ಇರಬೇಕಾಗಿಲ್ಲ, ಬರಬೇಕಾಗಿಲ್ಲ, ಬೆಳೆಯಬೇಕಾಗಿಲ್ಲ; ಕೊಲೆ-ಸುಲಿಗೆಗಳು, ಅಶಾಂತಿ-ಉದ್ವೇಗಗಳು, ಆಲಸ್ಯ-ಉದಾಸೀನತೆಗಳು ತುಂಬಿಕೊಳ್ಳಬೇಕಾಗಿಲ್ಲ. ಸೋಮಾರಿತನವನ್ನು ಬೇಜವಾಬ್ದಾರಿತನವನ್ನು ಕೊಡವಿಹಾಕಿ, ಜನಶಕ್ತಿ—ನಮ್ಮ ಸಮಾಜದ ಅಮೂಲ್ಯ ಸಂಪನ್ಮೂಲ, ಸಂಪತ್ತು—ಕ್ರಿಯಾಶೀಲಗೊಂಡಾಗ, ತಮ್ಮಲ್ಲಿರುವ ಶಕ್ತಿ-ಸಾಮರ್ಥ್ಯಗಳನ್ನು ಕಾರ್ಯ-ಕೌಶಲ್ಯಗಳನ್ನು ಸರಿಯಾದ ದಾರಿಯಲ್ಲಿ, ಎಲ್ಲರ ಒಳಿತನ್ನು ಬಯಸಿ ವಿಕಾಸಗೊಳಿಸಿದರೆ ಅದ್ಭುತಗಳೇ ಸಂಭವಿಸುವುದು ಖಂಡಿತ.

ನಮಗೆ ಒಂದು ಸಾಮಾಜಿಕ ಕಳಕಳಿ, ಸಾರ್ವಜನಿಕ ಹಿತಾಸಕ್ತಿ ಬೇಕು. ಇದು ನನ್ನ ಮನೆ, ನನ್ನ ಊರು, ನನ್ನ ದೇಶ ಎಂಬ ಭಾವನೆ ಬೇಕು. ಈ ಸಮಾಜ ನನ್ನದು, ಇಲ್ಲಿರುವ ಎಲ್ಲರೂ ನಮ್ಮವರು, ಇವರೆಲ್ಲರ ಒಳಿತಿನಲ್ಲಿ ನನ್ನ ಒಳಿತು ಅಡಗಿದೆ, ಈ ಸತ್ಯ ನಮ್ಮ ಪ್ರತಿಯೊಂದು ಕಲ್ಪನೆ, ಕೆಲಸಗಳಲ್ಲಿ ಮೇಳೈಸಬೇಕು. ಸ್ವಾರ್ಥ-ಮತ್ಸರಕ್ಕೆ, ದ್ವೇಷ-ದಳ್ಳುರಿಗಳಿಗೆ ಲೇಶಮಾತ್ರವೂ ಅವಕಾಶ ಕೊಡಬಾರದು. ಆ ಸ್ಥಳದಲ್ಲಿ ಉದಾತ್ತ ಭಾವನೆ, ಉದಾರ ಚಿಂತನೆ, ಮಾನವ ಪ್ರೇಮ, ಜೀವದಯೆ ತುಂಬಿಕೊಳ್ಳಬೇಕು. ವಿಶ್ವವಿದು ಭಗವಂತನಿಂದ ಆದದ್ದು. ಅವನ ಮನೆ! ಜೀವರ ರೂಪದಲ್ಲಿ ವಾಸ ಮಾಡುತ್ತಿರುವವನೂ ಅವನೇ! ಇದನ್ನು ನಾವು ಹೇಗೆ ಇಡಬೇಕು? ಎಷ್ಟೊಂದು ಪೂಜ್ಯ ಪವಿತ್ರ ಭಾವದಿಂದ ನೋಡಬೇಕು! ಶುಚಿಯಾಗಿ, ಸುಂದರವಾಗಿ, ಸುವ್ಯವಸ್ಥಿತವಾಗಿ ಇಡುವಲ್ಲಿ ಅದೆಷ್ಟು ಎಚ್ಚರ ವಹಿಸಬೇಕು! ಈ ಒಂದು ಶಿಸ್ತು-ಸಭ್ಯತೆ ನಮ್ಮ ನರನಾಡಿಗಳಲ್ಲಿ ನಿರಂತರವಾಗಿ ಹರಿಯಬೇಕಾಗಿದೆ. ಆಗ ಮಾತ್ರ, ನಮ್ಮ ಆರ್ಷ ಸಂಸ್ಕೃತಿಯ ಪುನರುದ್ಧಾರ ಸಾಧ್ಯ. ಆಗ ಮಾತ್ರ ನಮ್ಮ ಯೋಜನೆಗಳು, ಆದರ್ಶಗಳು, ಧ್ಯೇಯೋದ್ದೇಶಗಳು, ಸಫಲತೆಯತ್ತ ಸಾಗುವುದು ಸಂಭವನೀಯ.

ಇಂದು ನಾವೇನು ಮಾಡುತ್ತಿದ್ದೇವೆ? ಒಬ್ಬರನ್ನೊಬ್ಬರು ದೂರುವುದು! ಹಕ್ಕು, ಸ್ವಾತಂತ್ರ್ಯಗಳ ಹೆಸರಿನಲ್ಲಿ ನಮ್ಮಿಂದ ಸಾಧ್ಯವಾದಷ್ಟೂ ನಮ್ಮ ಸುತ್ತಮುತ್ತಲೂ ಇರುವವರಿಗೆ ತೊಂದರೆ ಕೊಡುವುದು! ಸ್ವಾತಂತ್ರ್ಯ ಸ್ವೇಚ್ಛಾಚಾರವಾಗಬಾರದು, ಬದಲಿಗೆ ಸುತ್ತಲಿರುವವರಿಗೆ ಸಹಾಯವಾಗುವ ರೀತಿಯಲ್ಲಿ ನಮ್ಮ ಸ್ವಾತಂತ್ರ್ಯದ ಬಳಕೆಯಾಗಬೇಕು. ನಮ್ಮ ನಡತೆಯಿಂದ ಬೇರೆಯವರಿಗೆ ಹಿಂಸೆಯಾಗಬಾರದು. ಬೇರೆಯವರಿಗೆ ತೊಂದರೆಯಾಗದ ರೀತಿಯಲ್ಲಿ ನಮ್ಮ ವ್ಯವಹಾರವಿರಬೇಕು. ಹಕ್ಕು ಕೇಳುವ ಮೊದಲು ನಾವು ನಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ್ದೇವೆಯೇ ಎಂದು ನಮ್ಮ ಮನಸ್ಸಾಕ್ಷಿಯನ್ನು ಕೇಳಿಕೊಳ್ಳಬೇಕು. ಈ ಮಣ್ಣಿನ ಗುಣ ಹಕ್ಕನ್ನು ಕೇಳುವುದಲ್ಲ, ಕರ್ತವ್ಯವನ್ನು ಮಾಡುವುದು; ಕೇಳುವುದಲ್ಲ, ಕೊಡುವುದು; ಕಬಳಿಸುವುದಲ್ಲ, ಕೈ ಬಿಚ್ಚಿ ಹಂಚುವುದು; ಬೇರೆಯವರನ್ನು ದೂರುವುದಲ್ಲ, ಬೇರೆಯವರು ದೂರದಂತೆ ಬಾಳುವುದು. ಇದು ನಮ್ಮ ಸುತ್ತಮುತ್ತಲಿನವರಿಗೆ ನಾವು ಮಾಡಬಹುದಾದ, ಮಾಡಲೇಬೇಕಾದ ಪವಿತ್ರವಾದ ಸೇವೆ. ಆಗ ಯಾವುದು ನಮಗೆ ಸಲ್ಲಬೇಕೋ ಅದು ತನ್ನಿಂದ ತಾನೇ ಖಂಡಿತ ಸಲ್ಲುತ್ತದೆ—ನೂರುಮಡಿಯಾಗಿ, ಸಾವಿರ ಮಡಿಯಾಗಿ.

> **ಪ್ರತಿಯಾಗಿ ಏನನ್ನೂ ಬಯಸಬೇಡಿ, ಆದರೆ ನೀವು ಹೆಚ್ಚು ಕೊಟ್ಟಷ್ಟೂ ನಿಮಗೆ ಹೆಚ್ಚು ಹಿಂತಿರುಗಿ ಬರುತ್ತದೆ....**
>
> —*ಸ್ವಾಮಿ ವಿವೇಕಾನಂದ*

ನಮಗೆ ಚರ್ಚು, ಮಸೀದಿ, ಮಠ-ಮಂದಿರಗಳನ್ನು ಕಟ್ಟುವ ಉತ್ಸಾಹ. ಇದು ಒಳ್ಳೆಯದೇ ಇರಬಹುದು. ಆದರೆ ಅದಕ್ಕೂ ಮೊದಲು ರಸ್ತೆಯುದ್ದಕ್ಕೂ ಅಲ್ಲಲ್ಲಿ ಕುಡಿಯುವ ನೀರು, ಶೌಚಾಲಯ, ಸ್ನಾನಗೃಹಗಳ ವ್ಯವಸ್ಥಿತ ಏರ್ಪಾಡು ಯಾಕೆ ಮಾಡಬಾರದು? ತಮ್ಮ ತಮ್ಮ ಮತ-ಸಂಪ್ರದಾಯ, ಪಕ್ಷ, ಪಂಗಡಗಳು ಶ್ರೇಷ್ಠವೆನ್ನುವ ಭರದಲ್ಲಿ ಪರಮತದೊಡನೆ ಗಲಭೆ-ಗೊಂದಲ-ದಂಗೆಗಳೇಕೆ? ಇನ್ನೊಬ್ಬರ ಮೇಲೆ ಕತ್ತಿ ಮಸೆದು ನಮ್ಮ ಶ್ರೇಷ್ಠತೆಯನ್ನು ಸಾಬೀತು ಪಡಿಸಬೇಕೆ? ಅಥವಾ ಇನ್ನೊಬ್ಬರ ಧ್ಯೇಯ ಆದರ್ಶಗಳಿಗೆ ಸ್ಪಂದಿಸಿ ಸ್ನೇಹಹಸ್ತವನ್ನು ಚಾಚಬೇಕೆ? ಸ್ವಾಮಿ ವಿವೇಕಾನಂದರು ಹೇಳಿದರು "ಪ್ರತಿಯೊಬ್ಬರೂ ಅವರವರ ಸ್ಥಾನದಲ್ಲಿ ಶ್ರೇಷ್ಠರು" ಎಂದು. ಶ್ರೀರಾಮಕೃಷ್ಣ ಪರಮಹಂಸರು ಹೇಳಿದರು, "ಎಷ್ಟು ಮತಗಳೋ ಅಷ್ಟು ಪಥಗಳು," ಎಂದು. ನಮ್ಮೆಲ್ಲ ಪೂರ್ವಜರು, ಗುರುಜನರು, ಸಾರಿ ಸಾರಿ ಹೇಳಿದರು, "**ಏಕಂ ಸತ್ ವಿಪ್ರಾಃ ಬಹುಧಾ ವದಂತಿ,**" "**ಲೋಕಾಃ ಸಮಸ್ತಾಃ ಸುಖಿನೋ ಭವಂತು,**" ಎಂದು ಮುಂತಾಗಿ. ಸಾಧು-ಸಂತರ ಮಹಾತ್ಮರ ದಿವ್ಯ

ವಾಣಿ ಮೊಳಗುತ್ತಲೇ ಇದೆ. ನಾವೂ ಗಿಳಿಗಳಂತೆ ಪಠಿಸುತ್ತಲೇ ಇರುತ್ತೇವೆ. ಈಗ ಈ ದಿಕ್ಕಿನಲ್ಲಿ ಒಂದು ಹೆಜ್ಜೆಯನ್ನು ಮುಂದೆ ಇಡೋಣ.

ಅದೊಂದು ಹಳ್ಳಿ. ಅಲ್ಲಿರುವ ಬಹು ಜನರು ಕೂಲಿಕಾರರು. ಗಂಡಸರೆಲ್ಲ ಹೆಚ್ಚು ಕಡಿಮೆ ತಮ್ಮ ಇಡೀ ದಿನದ ದುಡಿಮೆಯಿಂದ ಬಂದ ಹಣವನ್ನೆಲ್ಲ ಹೆಂಡದಂಗಡಿಗೆ ಸುರಿದು, ಪಾನಮತ್ತರಾಗಿ ಹಿಂದಿರುಗುತ್ತಿದ್ದರು. ಮನೆಯಲ್ಲಿ ಹೆಂಡತಿಮಕ್ಕಳು, ಹೆಚ್ಚಿನ ದಿನಗಳು ಹೊಟ್ಟೆಗೆ ತುತ್ತು ಹಿಟ್ಟಿಲ್ಲದೆ ಹಸಿದು ಮಲಗುವರು. ಸಾಲವ್ವಕ್ಕೆ ಕುಡಿದು ಮತ್ತೇರಿದವನಿಂದ ಅವಾಚ್ಯ ಬೈಗಳು, ಏಟುಗಳು. ಇದು ಆ ಹಳ್ಳಿಯ ಸಾಮಾನ್ಯ ದೃಶ್ಯ. ಇಂದು ಆ ಹಳ್ಳಿಯಲ್ಲಿ ಎಲ್ಲರೂ ಕುಡಿತವನ್ನು ಸಂಪೂರ್ಣವಾಗಿ ಬಿಟ್ಟಿದ್ದಾರೆ. ಒಬ್ಬನಾದರೂ ಪಾನಮತ್ತನಾಗಿರುವುದನ್ನು ಕಾಣಲಾರೆವು. ಇದು ಹೇಗೆ ಸಾಧ್ಯವಾಯಿತು? ಊರ ಮಹಿಳೆಯರೆಲ್ಲ ಜಾಗೃತರಾಗಿ, ಒಂದಾದರು. ತಮ್ಮ ಗಂಡಂದಿರ ಮನವೊಲಿಸಿ, ಹಲವು ಉಪಾಯಗಳಿಂದ ಅವರನ್ನು ಕುಡಿತದ ಕಪಿಮುಷ್ಟಿಯಿಂದ ಬಿಡುಗಡೆ ಮಾಡಿದರು.

ಇನ್ನೊಂದು ಹಳ್ಳಿ. ಅಲ್ಲೊಂದು ಒಂದೇ ಕೋಣೆಯಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ! ಅಲ್ಲಿರುವ ಶಿಕ್ಷಕರು, ಪಾಲಕರು, ಊರ ಹಿರಿಯರು ಎಲ್ಲರೂ ಒಂದಾಗಿ ಶ್ರಮವಹಿಸಿ ಎಲ್ಲ ತರಗತಿಗಳನ್ನೂ ನಡೆಸಲು ಸಾಕಾಗುವಷ್ಟು ಶಾಲಾಕೋಣೆಗಳನ್ನು ಕಟ್ಟಿದ್ದಾರೆ! ಶಾಲಾ ಅವಧಿ ಮುಗಿದಮೇಲೆ, ಮಕ್ಕಳು ಮನೆಗೆ ಹೋಗಿ ಸ್ವಲ್ಪ ಉಪಾಹಾರ ಮಾಡಿ, ಪುನಃ ಶಾಲೆಗೆ ಬಂದು, ಆಟಪಾಠಗಳಲ್ಲಿ ತೊಡಗುತ್ತಾರೆ. ರಾತ್ರಿ ಊಟ ಮುಗಿಸಿ ಮತ್ತೆ ಶಾಲೆಗೆ ಬಂದು ಓದಿಕೊಳ್ಳುತ್ತಾರೆ. ಶಿಕ್ಷಕರು ಮಕ್ಕಳ ಜೊತೆ ಇದ್ದು ಅವರಿಗೆ ಸಹಾಯ ಮಾಡುತ್ತಾರೆ. ಕೆಲವು ಮಕ್ಕಳು, ಶಿಕ್ಷಕರು ರಾತ್ರಿ ಅಲ್ಲೇ ಮಲಗುತ್ತಾರೆ. ಯಾರ ನೆರವನ್ನೂ ನಿರೀಕ್ಷಿಸದೇ ಆ ಊರ ಜನ ತಮ್ಮ ಊರಿನ ಸಂಪೂರ್ಣ ಅಭಿವೃದ್ಧಿಯ ಹೊಣೆ ಹೊತ್ತಿದ್ದಾರೆ. ಶ್ರಮದಾನ, ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಒಂದು ಪವಿತ್ರ ವಾತಾವರಣ ನಿರ್ಮಿಸುವ ಪ್ರಾಮಾಣಿಕ ಪ್ರಯತ್ನ ನಡೆದಿದೆ. ಇನ್ನೊಂದು ಆಶ್ಚರ್ಯವೆಂದರೆ ಸತತ ಪರಿಶ್ರಮದಿಂದ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕಾದ ಸುಮಾರು ೭೦೦ ಬಡಜನರಿರುವ ಪುಟ್ಟ ಊರು ಅದು!

ಸರಿಯಾಗಿ ರಸ್ತೆಯಿಲ್ಲದ, ವಾಹನ ಮುಂತಾದ ಸೌಲಭ್ಯಗಳಿಲ್ಲದ ಇನ್ನೊಂದು ಪುಟ್ಟ ಹಳ್ಳಿ. ಅಲ್ಲಿರುವವರೂ ಬಡ ಜನರೇ. ಅಲ್ಲೂ ಒಂದು ಪುಟ್ಟ ಶಾಲೆ. ಹತ್ತಿರದಲ್ಲೇ ಒಂದು ಹರಕು ಮುರುಕಾದ ಮಣ್ಣಿನ ಮನೆ-ಗುಡಿಸಲು. ಅಲ್ಲಿ ಇನ್ನೊಂದು ಅದ್ಭುತ! ಏನದು? ಆ ಗುಡಿಸಲೊಳಗೆ ಮಕ್ಕಳಿಗಾಗಿ ಒಂದಿಷ್ಟು ಆಟದ ಸಾಮಾನುಗಳು, ಮಕ್ಕಳ ಬುದ್ಧಿ ಬೆಳವಣಿಗೆಗೆ, ಸೃಜನಶೀಲತೆಗೆ ಪೂರಕವಾದ ಪಾಠೋಪಕರಣಗಳು, ನೀತಿಕತೆಗಳು, ಮಹಾಪುರುಷರ ಜೀವನ ಚರಿತ್ರೆಗಳು! ಆ ಊರಿನ ಪುಟ್ಟ ಪುಟ್ಟ ಮಕ್ಕಳು ತಮಗೆ ಬೇಕೆನ್ನಿಸಿದಾಗಲೆಲ್ಲ ಅಲ್ಲಿ ಬಂದು ಆಟ ಆಡಿ, ಕತೆ ಓದಿ—ಎಲ್ಲ ಆದಮೇಲೆ ತಾವು ಉಪಯೋಗಿಸಿದ ವಸ್ತುಗಳನ್ನು ಎಲ್ಲಿತ್ತೋ ಅಲ್ಲೇ, ಹೇಗಿತ್ತೋ ಹಾಗೇ ಒಪ್ಪವಾಗಿ ಜೋಡಿಸಿಟ್ಟು ಹೋಗುತ್ತಾರೆ. ಓದಬೇಕೆನ್ನಿಸಿದ ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಓದಿಯಾದ ಮೇಲೆ ಮರಳಿ ತಂದು ಸರಿಯಾದ ಸ್ಥಳದಲ್ಲಿ ಇಟ್ಟು ಹೋಗುತ್ತಾರೆ. ಒಂದು ಪುಸ್ತಕವೂ ಹರಿದು ಹಾಳಾಗಿಲ್ಲ. ಅದನ್ನೆಲ್ಲ ನೋಡಿಕೊಳ್ಳಲು ಏಳನೇ ತರಗತಿಯಲ್ಲಿ ಓದುವ ಒಬ್ಬ ಪುಟ್ಟ ಬಾಲಕ. ಒಂದೊಮ್ಮೆ ಅವನು ಅಲ್ಲಿ ಇಲ್ಲದಿದ್ದರೂ, ಅಲ್ಲಿರುವ ಎಲ್ಲ ವಸ್ತುಗಳು ಯಥಾಸ್ಥಾನದಲ್ಲಿಯೇ ಇರುತ್ತವೆ. ಮನೆಯ ಬಾಗಿಲು ಯಾವಾಗಲೂ ತೆರೆದೇ ಇರುತ್ತದೆ. ಮಕ್ಕಳಿಗೆ ಈ ಎಲ್ಲ ತರಬೇತಿ ನೀಡಿದವರು, ಸರಿಯಾಗಿ ತಮ್ಮ ಹೆಸರನ್ನೂ ಬರೆಯಲು ಬಾರದ ಆ ಊರ ಜನ, ಮುಖ್ಯವಾಗಿ ಆ ಊರಿನ ತಾಯಂದಿರು.

ಇವೆಲ್ಲ ಕಟ್ಟುಕತೆಯಲ್ಲ. ಕಣ್ಣಾರೆ ಕಂಡು ಆನಂದಿಸಿದ ದೃಶ್ಯ. ಇದನ್ನೆಲ್ಲ ನೋಡುತ್ತಿದ್ದಂತೆ, ಇತಿಹಾಸದ ಪುಟದ ಕೆಲವು ಸಾಲುಗಳು ನೆನಪಾದವು. ಎರಡನೇ ಪುಲಿಕೇಶಿ, ಹರ್ಷವರ್ಧನರ ಕಾಲದ ಸಮಾಜದ ಕುರಿತಾಗಿ ಚೀನಾದ ಮೇಧಾವಿ ಬೌದ್ಧ ಯಾತ್ರಿಕ ಹುಯೆನ್‌ತ್ಸಾಂಗ್ ಈ ರೀತಿ ಬರೆಯುತ್ತಾನೆ : "ದೇಶದ ಸಾಮಾನ್ಯಜನರು ಸ್ವಾಭಾವಿಕವಾಗಿ ಲಘುಮನಸ್ಸಿನವರಾದರೂ ನೈತಿಕ ನಡೆನುಡಿಗಳಲ್ಲಿ ಬಹಳ ಶುದ್ಧರು. ಅನ್ಯಾಯವಾಗಿ ಯಾವುದನ್ನೂ ಮತ್ತೊಬ್ಬರಿಂದ ಕಸಿದುಕೊಳ್ಳುವುದಿಲ್ಲ. ನ್ಯಾಯವಾಗಿ ಕೊಡಬೇಕಾದುದಕ್ಕಿಂತಲೂ ಹೆಚ್ಚು ಕೊಡುತ್ತಾರೆ...ಮೋಸಗೀಸಕ್ಕೆ ಕೈಹಾಕದೆ ನುಡಿದಂತೆ ನಡೆಯುತ್ತಾರೆ...." (ಪ್ರವಾಸಿ ಕಂಡ ಇಂಡಿಯಾ, ಸಂಪುಟ ೧, ಎಚ್.ಎಲ್. ನಾಗೇಗೌಡ, ಪುಟ ೨೦೨)

## ಜನಶಕ್ತಿ ಜಾಗೃತವಾದಾಗ, ಸರಿಯಾದ ದಾರಿಯಲ್ಲಿ ಸಾಗಿದಾಗ ಪವಾಡಗಳೇ ಸಂಭವಿಸುತ್ತವೆ.

ಇಂತಹ ಸನ್ನಿವೇಶ, ಪರಿಸರಗಳು ಊರಿಂದ ಊರಿಗೆ, ಪಟ್ಟಣದಿಂದ ಪಟ್ಟಣಕ್ಕೆ, ದೇಶದಿಂದ ದೇಶಕ್ಕೆ ಹಬ್ಬಿದಾಗ ಇಡೀ ವಿಶ್ವದಲ್ಲಿ ಒಂದು ಸುಂದರವಾದ ಪವಿತ್ರ ವಾತಾವರಣ ಸೃಷ್ಟಿಯಾಗುವುದಲ್ಲವೇ ?

ನಾವು ಪ್ರತಿಯೊಬ್ಬರೂ "ನನ್ನ ಮನೆ, ನಾನಿರುವ ಸ್ಥಳ, ನನ್ನ ಸುತ್ತಮುತ್ತಲನ್ನು, ನಾನೆಲ್ಲೆಲ್ಲಿ ಹೋಗುತ್ತೇನೊ ಆ ಸ್ಥಳವನ್ನು (ಭೌತಿಕವಾಗಿ, ನೈತಿಕವಾಗಿ, ಧಾರ್ಮಿಕವಾಗಿ) ಸ್ವಚ್ಛವಾಗಿಡಲು, ಶುದ್ಧವಾಗಿಡಲು, ಶಿಸ್ತುಬದ್ಧವಾಗಿಡಲು, ಸಭ್ಯ, ಸೌಜನ್ಯ ಹಾಗೂ ಪರಿಶುದ್ಧವಾಗಿರಿಸಲು ಆದಷ್ಟೂ ಪ್ರಯತ್ನಿಸುತ್ತೇನೆ, ಕಂಕಣಬದ್ಧನಾಗುತ್ತೇನೆ" ಎಂಬುದಾಗಿ ಮನಸ್ಸು ಮಾಡಬೇಕು. ಇನ್ನು ನಮ್ಮ ವ್ಯಾಪ್ತಿಯನ್ನು ಮೀರಿದ ಪರಿಸ್ಥಿತಿಯಲ್ಲಿ ಕಡೆಯಪಕ್ಷ ನಾವು ಒಬ್ಬೊಬ್ಬರೂ ನಮ್ಮ ಕಡೆಯಿಂದ ಸ್ವಚ್ಛವಾಗಿಡೋಣ.

ಕಾಗದಗಳನ್ನು, ಕಸಗಳನ್ನು ಕಂಡಕಂಡಲ್ಲಿ ಎಸೆಯದೇ ಇರೋಣ, ಕಂಡಕಂಡಲ್ಲಿ ಉಗುಳದೇ ಇರೋಣ. ಬಸ್ಸುಗಳಲ್ಲಿ ಮುದುಕರು, ಖಾಯಿಲೆ ಇರುವವರು, ಮಗುವನ್ನೆತ್ತಿಕೊಂಡ ತಾಯಂದಿರು ಇವರಿಗೆ ನಮ್ಮ ಪಕ್ಕದಲ್ಲಿ ಒಂದಿಷ್ಟು ಸ್ಥಳ ಕೊಡೋಣ. ಕುಳಿತು ಕೊಳ್ಳಲು ಅವರಿಗೆ ಅನುಕೂಲ ಮಾಡಿಕೊಡೋಣ. ನಿರ್ಗತಿಕರಿಗೆ, ದೀನದುಃಖಿಗಳಿಗೆ ಅದೆಷ್ಟೋ ಕಷ್ಟದಲ್ಲಿ ಫುಟ್‌ಪಾತಿನಲ್ಲಿ ನರಳುತ್ತಾ ಬಿದ್ದುಕೊಂಡಿರುವವರಿಗೆ ನಮ್ಮ ಹೃದಯದಲ್ಲಿ ಒಂದಿಷ್ಟು ಜಾಗ ಕೊಡೋಣ. ಪ್ರಯಾಣಿಕರಾಗಿ ನಮ್ಮ ಸಹ ಪ್ರಯಾಣಿಕರ, ವಾಹನ ಚಾಲಕರಾಗಿ ನಮ್ಮ ಸಹವಾಹನ ಚಾಲಕರ, ಪೊಲೀಸ್ ಇಲಾಖೆ, ಸರ್ಕಾರಿ ಕಛೇರಿ, ಮುಂತಾದ ಆಡಳಿತ ವ್ಯವಸ್ಥೆಗಳ ಅಧಿಕಾರಿಗಳಾಗಿ, ನೌಕರರಾಗಿ, ಕಾರ್ಯ ಕರ್ತರಾಗಿ ನಮ್ಮ ಜನಸಾಮಾನ್ಯರ, ದೀನ ದುರ್ಬಲರ, ಶಾಲಾ ಕಾಲೇಜುಗಳ ಶಿಕ್ಷಕರು, ಪಾಲಕರು, ವ್ಯವಸ್ಥಾಪಕರ ಅಧಿಕಾರಿಗಳಾಗಿ ಮಕ್ಕಳ.... ಹೀಗೆ ನಮ್ಮ ಸಮಾಜ ವ್ಯವಸ್ಥೆಯ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಮ್ಮ ಜೊತೆಯಲ್ಲಿರುವವರ ಅನುಕೂಲ ಅನಾನುಕೂಲಗಳನ್ನು, ಒಳಿತು-ಕೆಡುಕುಗಳನ್ನು ಗಮನಿಸಿ ಸ್ಪಂದಿಸಿ ಸಹಕರಿಸೋಣ. ಪ್ರೀತಿ, ಸೌಜನ್ಯಗಳಿಂದ ವ್ಯವಹರಿಸೋಣ. ಕಹಿ ವಾತಾವರಣ ಸೃಷ್ಟಿಯಾಗದಂತೆ ಬಾಳೋಣ. ಕರ್ತವ್ಯ ಪ್ರಜ್ಞೆ, ನಿಷ್ಠೆ, ಸಮದರ್ಶನ ಭಾವವನ್ನು ಬೆಳೆಸಿಕೊಳ್ಳೋಣ.

ಇದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಸಮಸ್ಯೆ ಇರುವುದು ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಎಂಬಲ್ಲಿ. ಇದಕ್ಕಾಗಿ ಪ್ರಯತ್ನ ಮೊದಲು ನಮ್ಮಿಂದ ಪ್ರಾರಂಭವಾಗಬೇಕು. ನಾವು ಒಬ್ಬೊಬ್ಬರೂ ಮೊದಲಿಗರಾಗಿ ಮುಂದಡಿ ಇಡಬೇಕು. ಶಾಶ್ವತವಾದುದು ಏನಿದೆಯೋ ಅದು ಎಂದಿಗೂ ಬದಲಾಗು ವುದಿಲ್ಲ. ಅದು ಹಿಂದೆ ಹೇಗಿತ್ತೋ, ಇಂದೂ ಹಾಗೇ ಇದೆ, ಮುಂದೆಯೂ ಹಾಗೇ ಇರುತ್ತದೆ. ಎಂದೆಂದಿಗೂ ಹಾಗೇ ಇರುತ್ತದೆ. ಆ ಪವಿತ್ರ ಸಂಸ್ಕೃತಿಯನ್ನು ನೋಡಬೇಕಾದರೆ, ಅದರ ಮೇಲೆ ಬಿದ್ದಿರುವ, ಅದನ್ನು ಮುಚ್ಚಿಹಾಕಿರುವ ಬೃಹದಾಕಾರದ ಕಸದ ರಾಶಿ ಗಳನ್ನು ಸಹಸ್ರ ಕೈಗಳಿಂದ ಗುಡಿಸಿ ತೆಗೆಯಬೇಕಾಗಿದೆ. ಅಂದು ಮಾರ್ಗರೆಟ್ ನೋಬೆಲ್ (ಸೋದರಿ ನಿವೇದಿತಾ) ಆ ದೇಶದಿಂದ ಬಂದು ಕಲ್ಕತ್ತಾದ ಬೀದಿಗಳನ್ನು ಗುಡಿಸಿದಳು. ಇನ್ನೂ ಎಷ್ಟೋ ಸೇವಾಕಾರ್ಯ ಮಾಡಿದಳು. ಇದಕ್ಕಾಗಿ ತನ್ನನ್ನೇ ಮುಡಿಪಾಗಿಟ್ಟಳು, ಮೇಲ್ಪಂಕ್ತಿ ಹಾಕಿಕೊಟ್ಟಳು. ನಾವೆಲ್ಲರೂ ಈ ದಿಶೆಯಲ್ಲಿ ಕಾರ್ಯೋನ್ಮುಖರಾಗೋಣ. ನಮ್ಮ ಮನೆಯನ್ನು, ನಮ್ಮ ಸುತ್ತ ಮುತ್ತಲನ್ನು, ನಮ್ಮದೇ ಸಮಾಜವನ್ನು ಸ್ವಚ್ಛವಾಗಿಡಲು ಪರಿ ಶುದ್ಧವಾಗಿಡಲು ಪವಿತ್ರವಾಗಿಡಲು ಮಾರ್ಗರೆಟ್ ನೋಬೆಲ್ ಗಳಿಗಾಗಿ ಕಾಯದೇ ನಮ್ಮ ಕೆಲಸವನ್ನು ನಾವೇ ಮಾಡೋಣ, ನಾವೇ ಬೆಳೆಸಿಕೊಂಡ ಹೀನ ಅ-ನಾಗರೀಕತೆಯನ್ನು, ಒರಟು ತನವನ್ನು, ಉದ್ಧಟತನವನ್ನು, ಹಿಂಸಾತ್ಮಕ ಪ್ರವೃತ್ತಿಯನ್ನು ತೊಡೆದುಹಾಕೋಣ.

ಒಂದು ಸ್ವಚ್ಛವಾದ, ಸುಂದರವಾದ ಉದ್ಯಾನವನ, ಅಂದವಾಗಿ ಓರಣವಾಗಿಟ್ಟುಕೊಂಡ ಮನೆ, ಶಾಂತವಾದ ಶುಚಿಯಾದ, ಶಿಸ್ತಿನಿಂದ ಕೂಡಿದ ಸಭ್ಯ ವಾತಾವರಣವಿರುವ ಒಂದು ದೇವಾಲಯ, ಧ್ಯಾನ ಮಂದಿರ—ಅಲ್ಲಿ ಹೋದಾಗ ಮನಸ್ಸು ಮುದಗೊಳ್ಳುತ್ತದೆ, ತಿಳಿಯಾಗುತ್ತದೆ, ಸಮಾಧಾನಗೊಳ್ಳುತ್ತದೆ, ಶಾಂತಿಯನ್ನು ತಳೆ ಯುತ್ತದೆ, ಮನಸ್ಸಿನಲ್ಲಿ ಪವಿತ್ರ ಭಾವನೆ ತುಂಬಿಕೊಳ್ಳುತ್ತದೆ. ಯಾಕೆ? ಸ್ವಚ್ಛತೆ, ಶಿಸ್ತು, ಶ್ರದ್ಧೆ, ಏಕಾಗ್ರತೆ, ಪವಿತ್ರತೆಗಳಿಗೆ ಪರಸ್ಪರ ಸಂಬಂಧ ಇದೆ ಎನ್ನುವುದು ಇದರಿಂದ ಸುಸ್ಪಷ್ಟ. ಒಂದು ಸಮಾಜ ಸರ್ವಾಂಗ ಸುಂದರವಾಗಲು ಈ ಎಲ್ಲವೂ ಅತ್ಯಂತ ಅಗತ್ಯ. ಹೀಗೆ ನಮ್ಮ ಬದುಕನ್ನು ಒಂದು ಸರಳವಾದ ಶಿಸ್ತಿಗೆ ಒಳಪಡಿಸೋಣ. ತನ್ಮೂಲಕ ನಮ್ಮ ಸುತ್ತಮುತ್ತಲ ಪರಿಸರವನ್ನೂ ಸುಂದರವಾಗಿ, ಪವಿತ್ರವಾಗಿ ಇಡುವಲ್ಲಿ ಶಕ್ತಿಮೀರಿ ಶ್ರಮಿಸೋಣ. ಭಗವಂತ ನೆದುರು ನಮ್ಮನ್ನೊಂದು ಧೂಳಿನ ಕಣಕ್ಕೂ ಹೋಲಿಸಲಾಗದು. ಆದರೂ ನಮ್ಮೆಲ್ಲರೊಳಗೂ, ಅವನೇ ಇಟ್ಟ ಒಂದು ಪುಟ್ಟ ಕಿಡಿ ಇದೆಯಲ್ಲಾ, ಇದನ್ನೇ ಉರಿಸೋಣ, ಬೆಳಗಿಸೋಣ. ರವೀಂದ್ರ ನಾಥ ಠಾಗೋರರ ಕವಿತೆಯ ಸಾಲುಗಳು ಹೀಗಿವೆ:

*ಕೇ ಲಯಿಬೆ ಮೋರ್ ಕಾರ್ಯ, ಕಹೆ ಸಂಧ್ಯಾರವಿ*
*ಶುನಿಯಾ ಜಗತ್ ರಹೇ ನಿರುತ್ತರ ಛಬಿ!*
*ಮಾಟಿರ್ ಪ್ರದೀಪ್ ಛಿಲೊ, ಶೇ ಕಹಿಲೊ ಸ್ವಾಮೀ*
*ಆಮಾರ್ ಜೇಟೂಕು ಸಾಧ್ಯ ಕೊರಿಬೊ ತಾ ಆಮಿ*

"ಸಂಧ್ಯಾರವಿ ಕೇಳಿದ 'ಯಾರು ನನ್ನ ಕಾರ್ಯ ವಹಿಸಿ ಕೊಳ್ಳುತ್ತೀರಿ?' ಕೇಳಿ ಜಗತ್ತು ಮೌನ ತಾಳಿತು. ಅಲ್ಲೊಂದು ಮಣ್ಣಿನ ಹಣತೆ. ಅದು ಹೇಳಿತು 'ಸ್ವಾಮಿ, ನನ್ನಿಂದ ಎಷ್ಟು ಸಾಧ್ಯವೋ ಅಷ್ಟು ಮಾಡುತ್ತೇನೆ.'"

ಆ ಮಣ್ಣಿನ ಹಣತೆ ಸೂರ್ಯನಿಗೆ ಹೇಳಿದಂತೆ—"ಪ್ರಭು! ನಿನ್ನೆದುರು ನಾನೊಂದು ಪುಟ್ಟ ದೀಪ... ನೀನು ಬರುವವರೆಗೂ ನನ್ನ ಈ ಮಿಣುಕು ಬೆಳಕನ್ನು ಬೆಳಗಿಸುತ್ತೇನೆ" ಎನ್ನೋಣ. ❖

## ಆಶ್ರಮದ ಕಾರ್ಯಕ್ರಮಗಳು

### ಫೆಬ್ರುವರಿ 2003

| | | |
|---|---|---|
| *ಸ್ವಾಮಿ ಬ್ರಹ್ಮಾನಂದ ಜಯಂತಿ* | ಸೋಮವಾರ | 3 |
| *ಸ್ವಾಮಿ ತ್ರಿಗುಣಾತೀತಾನಂದ ಜಯಂತಿ* | ಬುಧವಾರ | 5 |
| *ಏಕಾದಶಿ* | ಗುರುವಾರ | 13 |
| *ಸ್ವಾಮಿ ಅದ್ಭುತಾನಂದ ಜಯಂತಿ* | ಭಾನುವಾರ | 16 |
| *ಏಕಾದಶಿ* | ಗುರುವಾರ | 27 |